ಬೀಗಣ್ಣ, ಬೀಗತ್ತಿಗೆಯಾಗಿ ಓಡಾಡಿಕೊಂಡಿರುತ್ತಿದ್ದರು.

ಶೇಖರ ಇವರನ್ನು ಕಂಡೊಡನೆ ಬಾಯಿತುಂಬಾ, 'ಚಿಕ್ಕಪ್ಪ, ಚಿಕ್ಕಮ್ಮ ಇಷ್ಟು ತಡ ಯಾಕೆ ಮಾಡಿದಿರಿ' ಎಂದು ಪ್ರೀತಿಯಿಂದ ಆಕ್ಷೇಪ ತೆಗೆದ. ಗಿರಿಜತ್ತಿಗೆ ನಗುತ್ತ ಶೇಖರನ ಮುಖ ಬಳಿದು ಲಟ್ಟಿಗೆ ತೆಗೆದು ಒಳ ಹೊರಟಳು.

ವಾಗ್ದಾನ ಮುಗಿದಿತ್ತು ಕಾಣಿಸುತ್ತದೆ, ರಾಧಾ ಕೋಣೆಯಲ್ಲಿ ತಯಾರಾಗುತ್ತಿದ್ದಳು. ಗಿರಿಜತ್ತಿಗೆ ತಾನೇನು ಮನಸ್ಸಿಗೆ ಹಚ್ಚಿಕೊಂಡಿಲ್ಲ ಎನ್ನುವಂತೆ ಆರತಿ ಬಟ್ಟಲು ತಯಾರು ಮಾಡಿ, ಎಣ್ಣೆಯಲ್ಲಿಟ್ಟ ನೆಣೆಯನ್ನು ಜೋಡಿಸಿದಳು.

ಕುಮ್ರಿ ಗದ್ದೆಯ ಆಯಿಯಂತೂ ಪಟ್ಟಿ ಹಿಡಿದು ಒಂದಾದ ಮೇಲೊಂದು ಹಾಡು ಹುಡುಕಿ ಹಾಡುತ್ತಿದ್ದಳು. ಸ್ವಲ್ಪ ನಡುಗುವ ದನಿಯಾದರೂ ಬಹಳ ಚೆಂದದ ರಾಗದಲ್ಲಿ ಹಾಡುವವಳು ಆಯಿ. ಮದುವೆ ಮನೆಯ ಒಂದೊಂದು ಕೆಲಸದ ಮೇಲೂ ಹತ್ತು ಹಾಡುಗಳನ್ನು ಹಾಡಬಲ್ಲವಳಾಗಿದ್ದಳು, ನಿಂತಲ್ಲಿಯೇ ಹೊಸ ಹಾಡುಗಳನ್ನೂ ಹೊಸೆದುಬಿಡುತ್ತಿದ್ದಳು ಕುಮ್ರಿಗದ್ದೆಯ ಆಯಿ.

ಹಳದಿ ಬಣ್ಣದ ಹುಚ್ಚಿನ ರಾಧಾ ಹಳದಿ ಬಣ್ಣದ ಸೀರೆಗೆ ಕಡುಗೆಂಪು ಬಣ್ಣದ ಬಾರ್ಡರ್ ಇರುವ ಸೀರೆಯನ್ನೇ ಉಡಬಹುದು ಎಂದು ಯೋಚಿಸುತ್ತ ಮತ್ತೆರಡು ಆರತಿ ಬಟ್ಟಲನ್ನು ತಯಾರು ಮಾಡಿಟ್ಟಳು ಗಿರಿಜತ್ತಿಗೆ.

ಶೇಖರನ ಅಜ್ಜಿಮನೆಯ ಮುದ್ದಮ್ಮ, 'ಯಮ್ಮನೆ ಶೇಖರಂಗೆ ಹಸಿರು ಬಣ್ಣ ಅಂದ್ರೆ ಭಾರಿ ಪ್ರೀತಿ. ಅವ್ವಿಬ್ಬರೇ ಹೋಗಿ ಮದುವೆ ಸೀರೆ ಆರಿಸಿ ತಂದಿದ್ದು' ಎಂದಿದ್ದು ಕೇಳಿಸದೇ ಇದ್ದೀತೆ ಪಕ್ಕದಲ್ಲೇ ಕುಳಿತ ಗಿರಿಜತ್ತಿಗೆಗೆ. ರಾಧಾ ನಿಜವಾಗಲೂ ಬದಲಾಗಿಬಿಟ್ಟಳು ಎಂದುಕೊಂಡಳು ವೇಣುವಿನ ಅಮ್ಮ..

ಗಿರಿಜತ್ತಿಗೆಗೆ ಬದಲಾದ ರಾಧಾಳನ್ನು ಕಂಡು ಮಾತನಾಡಿಸಲೇಬೇಕು ಅನ್ನಿಸಿತು. ಕೂಡಲೇ ಮದುವೆಕೂಸಿನ ರೂಮನ್ನು ಹೊಕ್ಕಳು. ಮದುವಣಗಿತ್ತಿಯನ್ನು ಮಂಟಪಕ್ಕೆ ಕರೆದೊಯ್ಯಲು ಎಲ್ಲರೂ ಗಡಿಬಿಡಿಯಲ್ಲಿ ತಯಾರಿಗೆ ತೊಡಗಿದ್ದರು. ಇದೆಲ್ಲವುದರ ಮಧ್ಯೆಯೂ ಗಿರಿಜತ್ತಿಗೆಯ ಬಾಡಿದ ಮುಖ ಕಂಡೊಡನೆಯೇ ರಾಧಾ, 'ಅತ್ತೆ, ಅಳಬೇಕಿದ್ದ ನಾನೇ ನಗುತ್ತಿದ್ದೇನೆ, ಚೆಂದದ ಬದುಕು ನನ್ನನ್ನು ಕಾಯುತ್ತಿದೆ ಎಂದು ತಿಳಿದ ಮೇಲೆ ಹಳೆಯದನ್ನೆಲ್ಲ ಕೆದಕಿದರೆ ನನಗ್ಯಾವ ನಿಧಿ ದೊರಕೀತು? ನಿನ್ನ ಸೊಸೆಯಾಗಿ ಹುಟ್ಟಿದವಳು ವೇಣುವಿಗೆ ವಧುವಾಗಿ ಬರುವುದು ಬಹಳ ದೂರವಿಲ್ಲ ಬಿಡು. ನಾವೇ ಅವನನ್ನು ತಪ್ಪು ತಿಳಿದಿದ್ದೆವು...' ಕಣ್ಣಹನಿಯೊಂದು ರಾಧಾಳ ಬಟ್ಟಲು ಕಂಗಳಿಂದ ಇಳಿದು ತೆಳ್ಳಗೆ ಹಚ್ಚಿದ ಕಾಡಿಗೆಯನ್ನು ತೆವಡುವುದರಲ್ಲಿತ್ತು.

ಮುಹೂರ್ತ ಮೀರುತ್ತಿದೆ ಎಂದು ಭಟ್ಟರ ವರಾತ ಜೋರಾಗುತ್ತಿದ್ದಂತೆಯೇ ಗಿರಿಜತ್ತಿಗೆ ಆರತಿ ಬಟ್ಟಲಿಗೆ ಅರಿಸಿನ ಕುಂಕುಮವಿಡಲು ಇತ್ತ ಬರಲೇಬೇಕಾಯ್ತು. ರಾಧಾಳ ಮಾತಿಗೆ ಅರ್ಥ ಕಲ್ಪಿಸುವುದು ಹೇಗೆ ಎಂಬ ಸಂದಿಗ್ಧತೆ ಗಿರಿಜತ್ತಿಗೆಗೆ. ವೇಣು ರಾಧಾಳನ್ನು ಬಿಟ್ಟು ಬೇರೆ ಹುಡುಗಿಯನ್ನು ಹುಡುಕಿಕೊಂಡನೇ, ಇಷ್ಟು ವರ್ಷದ ಗೆಳೆತನಕ್ಕೆ ನಾವು ಅರ್ಥಕಲ್ಪಿಸಿದ್ದು ವೇಣುವಿಗೆ ಸಮ್ಮತವಿರಲಿಲ್ಲವೇ!! ಗಿರಿಜತ್ತಿಗೆ ಇನ್ನೂ ಇನ್ನೂ ಒಗಟಿನೊಳಗಿಳಿದಳು.

ಕಣ್ಣ ತುಂಬ ಹೊಸ ಕನಸುಗಳನ್ನು ಹೆಣೆಯುತ್ತ ಸೋದರ ಮಾವನ ಕೈ ಹಿಡಿದು ಬಂದು ಮಂಟಪದಲ್ಲಿ ಕುಳಿತ ರಾಧೆ ಹಸಿರುಟ್ಟ ಭೂದೇವಿ ಮಳೆಗಾಲದಲ್ಲಿ ನಗುವಂತೆ ಮುದ್ದಾಗಿ ನಗುನಗುತ್ತ ಕುಳಿತಳು.